# ಕರ್ನಾಟಕ ವಿಧಾನ ಪರಿಷತ್ತು

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 474**

**02. ಸದಸ್ಯರ ಹೆಸರು : ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ)**

**03. ಉತ್ತರಿಸುವ ದಿನಾಂಕ : 15.09.2022**

**04. ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪೊಲೀಸರಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯ ಮಾಡಿರುವುದು ನಿಜವೇ? | ಹೌದು.<br>ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರ ನಿಯಮ 1(3) ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಮಾತ್ರ ಕಂಪ್ಯೂಟರ್ ಪರೀಕ್ಷೆ ಉತ್ತೀರ್ಣತೆಗೆ ವಿನಾಯಿತಿ ನೀಡಿರುವುದರಿಂದ ಪೊಲೀಸ್ ಇಲಾಖೆಯಲ್ಲಿನ ಕಾನ್ಸ್‌ಟೇಬಲ್ ರವರುಗಳನ್ನು ಹೊರತು ಪಡಿಸಿ ಇತರೆ ಎಲ್ಲಾ ವೃಂದದ ಪೊಲೀಸ್ ಸಿಬ್ಬಂದಿಗಳಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯ ಮಾಡಲಾಗಿರುತ್ತದೆ. |
| ಆ) | ಅದರಲ್ಲಿ ವಯೋಮಿತಿ ಮೀರಿದ ನಿವೃತ್ತಿ ಅಂಚಿನಲ್ಲಿರುವವರಿಗೆ ಇದರ ಅವಶ್ಯಕತೆಯಿದೆಯೇ? | ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರ ನಿಯಮ 3(1) ರನ್ವಯ ಈ ನಿಯಮ ಪ್ರಾರಂಭದ ದಿನಾಂಕದಂದು 50 ವರ್ಷಗಳ ವಯಸ್ಸಾಗಿರುವ ಸರ್ಕಾರಿ ನೌಕರರಿಗೆ ವಿನಾಯಿತಿ ನೀಡಲಾಗಿರುತ್ತದೆ. |
| ಇ) | ವಿವಿಧ ಸ್ತರದ ಮೀಸಲು ಪೊಲೀಸ್ ಪಡೆಯ ಪೊಲೀಸರಿಗೂ ಕಂಪ್ಯೂಟರ್ ಕಲಿಕೆ ಕಡ್ಡಾಯಗೊಳಿಸಿರುವುದು ನಿಜವೇ? | ಹೌದು |
| ಈ) | ಹಾಗಿದ್ದಲ್ಲಿ, ಮೀಸಲು ಪೊಲೀಸ್ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಕಂಪ್ಯೂಟರ್ ಕಲಿಕೆಯಿಂದ ಆಗುವ ಅನುಕೂಲಗಳೇನು; ಕೇವಲ ಕಾನೂನು ಪಾಲನೆ, ಗಣ್ಯವ್ಯಕ್ತಿಗಳ ರಕ್ಷಣೆಗೆ ಮೀಸಲಾಗಿರುವ ಪಡೆಗಳಿಗೆ ಈ ನಿಯಮ ಅನ್ವಯಿಸುವುದು ಸೂಕ್ತವೇ; | ಪ್ರಸ್ತುತ ರಕ್ಷಣೆ, ಬಂದೋಬಸ್ತು ಮತ್ತು ಮತ್ತಿತರ ಎಲ್ಲಾ ವಿಭಾಗಗಳಲ್ಲಿ ಆಧುನಿಕ ತಂತ್ರಾಂಶಗಳ ಬಳಕೆ ಮಾಡುತ್ತಿರುವುದರಿಂದ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿಗಳು ತಂತ್ರಾಂಶ ಬಳಕೆ ಬಗ್ಗೆ ಸಾಮಾನ್ಯ ಜ್ಞಾನವನ್ನು ಹೊಂದಿರುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಕಾನೂನು ಪಾಲನೆ, ಗಣ್ಯವ್ಯಕ್ತಿಗಳ ರಕ್ಷಣೆಗೆ ಮೀಸಲಾಗಿರುವ ಪಡೆಗಳಿಗೆ ಈ ನಿಯಮ ಅನ್ವಯಿಸುವುದು ಸೂಕ್ತವಾಗಿರುತ್ತದೆ. |

..2

| ಕ್ರಸಂ. | ಪ್ರಶ್ನೆ | ಉತ್ತರ |
| --- | --- | --- |
| ಉ) | ಅನಿರ್ವಾಯವಾಗಿದ್ದಲ್ಲಿ, ಮೀಸಲು ಪೊಲೀಸ್ ಪಡೆಯ ನಾಗರೀಕ ಸೇವೆಯ ಪೊಲೀಸ್ ಠಾಣೆಗಳಿಗೆ ನಿಯುಕ್ತಿ ಮಾಡಿ ಬಳಕೆ ಮಾಡಿಕೊಳ್ಳಲಾಗುವುದೇ; ಇಲ್ಲದಂತದಾದಲ್ಲಿ, ಮೀಸಲು ಪೊಲೀಸ್ ಸಿಬ್ಬಂದಿಗಳಿಗೆ ಹಾಗೂ ನಿವೃತ್ತಿ ಅಂಚಿನಲ್ಲಿರುವ ಪೊಲೀಸರಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯ ಮಾಡಿರುವುದಕ್ಕೆ ವಿನಾಯಿತಿ ನೀಡುವುದು ಸೂಕ್ತವಲ್ಲವೇ? (ವಿವರವಾದ ಮಾಹಿತಿ ನೀಡುವುದು) | ಪ್ರಸ್ತುತ ಮೀಸಲು ಪಡೆಯ ಸಿಬ್ಬಂದಿಗಳನ್ನು ನಾಗರೀಕ ಸೇವೆಯ ಪೊಲೀಸ್ ಠಾಣೆಗಳಿಗೆ ನಿಯುಕ್ತಿಗೊಳಿಸಿರುವ ಯಾವುದೇ ಪ್ರಸ್ತಾಪವಿರುವುದಿಲ್ಲ.<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 68 ಕತವ 2019 ದಿನಾಂಕ: 30.11.2019 ರಲ್ಲಿ ಸರ್ಕಾರವು ಇ–ಆಫೀಸ್ ತಂತ್ರಾಂಶವನ್ನು ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯಗೊಳಿಸಿರುವ ಹಿನ್ನಲೆಯಲ್ಲಿ, ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್, ಗ್ರೂಪ್–ಡಿ ಸಿಬ್ಬಂದಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಅವಶ್ಯಕವಾಗಿರುತ್ತದೆ.<br>ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರ ನಿಯಮ 3(1) ರನ್ವಯ ಈ ನಿಯಮ ಪ್ರಾರಂಭದ ದಿನಾಂಕದಂದು 50 ವರ್ಷಗಳ ವಯಸ್ಸಾಗಿರುವ ಸರ್ಕಾರಿ ನೌಕರರಿಗೆ ವಿನಾಯಿತಿ ನೀಡಲಾಗಿರುತ್ತದೆ. |

**HD/192/PPS/2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು